**ದಿಃ01-09-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : ವಾದಿಯ ಪರ ಶ್ರೀ ಆರ್.ಎಂ.ಓ. ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. 2 ಮತ್ತು 3 ನೇ ಪ್ರತಿವಾದಿಯರು 6 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತಾರೆ. 4 ನೇ ಪ್ರತಿವಾದಿ 3 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತಾರೆ. 5 ನೇ ಪ್ರತಿವಾದಿ 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತಾರೆ. ನನ್ನ ತಂದೆಗೆ 9 ಜನ ಮಕ್ಕಳು. 4 ಜನ ಗಂಡು ಮಕ್ಕಳು ಮತ್ತು 5 ಜನ ಹೆಣ್ಣು ಮಕ್ಕಳು. 1 ನೇ ಪ್ರತಿವಾದಿ ನನ್ನ ತಂದೆಯ 2 ನೇ ಮಗ. ನನ್ನ ಅಣ್ಣನಾದ 1 ನೇ ಪ್ರತಿವಾದಿಯ ಮಕ್ಕಳೇ ಈ ದಾವೆಯನ್ನು ಸಲ್ಲಿಸಿದ್ದಾರೆ. ನನ್ನ ಇತರೆ ಸಹೋದರರ ಹೆಸರು ರುದ್ರಪ್ಪ, ಮಲ್ಲಿಕಾರ್ಜುನ ಮತ್ತು ದಿವಾಕರ್. ನನ್ನ ತಂದೆ ತಾಯಿ ಜೀವಂತ ಇದ್ದಾಗಲೇ ಎಲ್ಲಾ ಮಕ್ಕಳ ವಿವಾಹ ಆಗಿತ್ತು. ವಿವಾಹದ ನಂತರದಲ್ಲಿ 2 ರಿಂದ 6 ನೇ ಪ್ರತಿವಾದಿಯರಾದ ನಾವುಗಳು ನಮ್ಮ ನಮ್ಮ ವೈವಾಹಿಕ ಕುಟುಂಬಗಳಲ್ಲಿ ಜೀವನವನ್ನು ನಡೆಸಿಕೊಂಡು ಬರುತ್ತಿದ್ದೇವೆ ಎಂದರೆ ಸರಿ. ನನ್ನ ಎಲ್ಲಾ ಸಹೋದರರು ಬೇರೆಯಾಗಿ ಅವರ ಕುಟುಂಬದೊಂದಿಗೆ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ ಎಂದರೆ ಸರಿ. ನನ್ನ 4 ಜನ ಸಹೋದರರಿಗೆ ನಮ್ಮ ತಂದೆಯಿಂದ ಜಮೀನುಗಳು, ಮನೆಗಳು ಮತ್ತು ನಿವೇಶನಗಳು ಪಿತ್ರಾರ್ಜಿತವಾಗಿ ವಿಭಾಗದ ಮೂಲಕ ಬಂದಿರುತ್ತವೆ ಎಂದರೆ ಸರಿ. ನನ್ನ ಎಲ್ಲಾ ಸಹೋದರರು ಭಾಗ ಮಾಡಿಕೊಂಡಿರುವ ಪ್ರಕಾರ ಅವರವರ ಹೆಸರಿಗೆ ಖಾತೆ ಏರ್ಪಟ್ಟಿರುತ್ತವೆ ಎಂದರೆ ಸರಿ.

2. ದಾವಾ ಅನುಸೂಚಿತ ಸ್ವತ್ತುಗಳು 1 ನೇ ಪ್ರತಿವಾದಿಗೆ ವಿಭಾಗದ ಮೂಲಕ ಬಂದಂತಹ ಸ್ವತ್ತುಗಳು ಎಂದರೆ ಸಾಕ್ಷಿ ದಾವಾ ಸ್ವತ್ತುಗಳನ್ನು ನಮ್ಮ ತಂದೆ ಹೆಣ್ಣು ಮಕ್ಕಳಿಗೆ ಹರಿಷಿಣ ಕುಂಕುಮಕ್ಕಾಗಿ ಕೊಟ್ಟಿದ್ದು, ಆ ಪ್ರಕಾರ ನನ್ನ ಅಣ್ಣನಾದ ಓಂಕಾರಪ್ಪನವರು ನಮಗೆ ನೀಡಿದ್ದಾರೆ ಎಂದು ಹೇಳುತ್ತಾರೆ. ನನ್ನ ತಂದೆಯಿಂದ ನನ್ನ ಎಲ್ಲಾ ಸಹೋದರರಿಗೆ ವಿಭಾಗದಲ್ಲಿ ಎಷ್ಟು ಎಕರೆಯ ಜಮೀನುಗಳು ಬಂದಿರುತ್ತವೆ ಎಂದು ನೆನಪಿಲ್ಲ. ನನಗೆ ಸ.ನಂ.44/4 ರ ಕುರಿತು ಈ ದಾವೆಯಲ್ಲಿ ಸೇರ್ಪಡೆ ಮಾಡಿರುವ ಬಗ್ಗೆ ಮಾಹಿತಿ ಇದೆ. ನಾನು ಪ್ರತಿವಾದ ಪತ್ರ ಸಲ್ಲಿಸುವ ಕಾಲಕ್ಕೆ ಸ.ನಂ.44/4 ರ ಸ್ವತ್ತನ್ನು ಹೊರತುಪಡಿಸಿ ಇತರೆ ಯಾವೆಲ್ಲಾ ಸ್ವತ್ತುಗಳನ್ನು ಸೇರ್ಪಡೆ ಮಾಡಿದ್ದಾರೆ ಎಂಬ ಬಗ್ಗೆ ಕೇಳಿ ತಿಳಿದುಕೊಂಡಿಲ್ಲ.

3. ದಾವಾ ಅನುಸೂಚಿತ 1 ನೇ ಖಂಡಿಕೆಯ ಸ್ವತ್ತು ನನ್ನ ತಂದೆಯಿಂದ 1 ನೇ ಪ್ರತಿವಾದಿಗೆ ವಿಭಾಗದ ಮೂಲಕ ಬಂದಂತಹ ಸ್ವತ್ತು ಎಂದರೆ ಸರಿ. ದಾವಾ ಅನುಸೂಚಿತ 4 ರಿಂದ 7 ನೇ ಖಂಡಿಕೆಯ ಸ್ವತ್ತುಗಳು 1 ನೇ ಪ್ರತಿವಾದಿಗೆ ವಿಭಾಗದ ಮೂಲಕ ನನ್ನ ತಂದೆಯಿಂದ ಬಂದಿರುತ್ತವೆ ಎಂದರೆ ಸರಿ. ದಾವಾ ಅನುಸೂಚಿತ 2 ಮತ್ತು 3 ನೇ ಖಂಡಿಕೆಯ ಸ್ವತ್ತುಗಳನ್ನು ಹೊರತುಪಡಿಸಿ ಇತರೆ ಸ್ವತ್ತುಗಳ ಕುರಿತು ನನ್ನ ತಂದೆಯಿಂದ ವಿಭಾಗ ಪತ್ರದಂತೆ ನನ್ನ ಅಣ್ಣನಾದ 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಏರ್ಪಟ್ಟಿದೆ. ಚಿಕ್ಕಜಾಜೂರು ಗ್ರಾಮದ ಸ.ನಂ.44/ಪಿ ರಲ್ಲಿ ನನ್ನ ತಂದೆಯ ಹೆಸರಿಗೆ ಒಟ್ಟು 7 ಎಕರೆ 35 ಗುಂಟೆ ಸ್ವತ್ತು ಇತ್ತು ಎಂದರೆ ಸರಿ. 7 ಎಕರೆ 35 ಗುಂಟೆ ಪೈಕಿ ನನ್ನ ತಂದೆಯ ಹೆಸರಿಗೆ 4 ಎಕರೆ ಹಾಗೂ 1 ನೇ ಪ್ರತಿವಾದಿಯ ಹೆಸರಿಗೆ 3 ಎಕರೆ 35 ಗುಂಟೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಮುಟೇಷನ್ ವಹಿಯನ್ನು ತೋರಿಸಿ, ಅದರಂತೆ ನನ್ನ ತಂದೆಯ ಹೆಸರಿಗೆ 4 ಎಕರೆ ಹಾಗೂ 1 ನೇ ಪ್ರತಿವಾದಿಯ ಹೆಸರಿಗೆ 3 ಎಕರೆ 35 ಗುಂಟೆ ಖಾತೆ ಏರ್ಪಟ್ಟಿರುತ್ತದೆ ಎಂದರೆ ಸರಿಯಲ್ಲ.

4. ನಮಗೆ ನಮ್ಮ ಅಣ್ಣನಾದ ಓಂಕಾರಪ್ಪರವರು ದಾನಪತ್ರವನ್ನು ಮಾಡಿಕೊಟ್ಟಿರುತ್ತಾರೆ. ನನ್ನ ಅಣ್ಣನಾದ 1 ನೇ ಪ್ರತಿವಾದಿ ನಮ್ಮ ಹೆಸರಿಗೆ ದಾನಪತ್ರವನ್ನು ಜಾರಿಮಾಡಿ ಕೊಡುವ ಕಾಲಕ್ಕೆ ನನ್ನ ತಂದೆ ಅನಾರೋಗ್ಯದಿಂದ ಬಳಲುತ್ತಿದ್ದು, ಜೀವಂತ ಇದ್ದರು. ನನ್ನ ಅಣ್ಣನಾದ 1 ನೇ ಪ್ರತಿವಾದಿ ನಮ್ಮ ಹೆಸರಿಗೆ ದಾನ ಪತ್ರ ಜಾರಿಮಾಡಿಕೊಡುವ ಕಾಲಕ್ಕೆ ಸದರಿ ಸ್ವತ್ತಿನ ಖಾತೆ ನನ್ನ ತಂದೆಯ ಹೆಸರಿನಲ್ಲಿ ಇತ್ತು. ನನ್ನ ತಂದೆಯ ಹೆಸರಿನಲ್ಲಿ ಖಾತೆ ಇತ್ತು ಎಂಬ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. ನನ್ನ ತಂದೆಯ ಹೆಸರಿನಲ್ಲಿ ದಾನಪತ್ರ ಏರ್ಪಡುವ ಕಾಲಕ್ಕೆ 3 ಎಕರೆ 35 ಗುಂಟೆ ಸ್ವತ್ತಿನ ಖಾತೆ ಇತ್ತು. ನನ್ನ ಅಣ್ಣನಾದ 1 ನೇ ಪ್ರತಿವಾದಿ ಜಾರಿಮಾಡಿಕೊಟ್ಟಿರುವ ದಾನಪತ್ರಕ್ಕೆ ನನ್ನ ತಂದೆ ಸಹಿ ಮಾಡಿದ್ದಾರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾನಪತ್ರ ಜಾರಿಯಾದ ಕಾಲಕ್ಕೆ ನಿಮ್ಮ ತಂದೆಯ ಹೆಸರಿನಲ್ಲಿ ಖಾತೆ ಇದ್ದು, ಹಾಗಾಗಿ ನಿಮ್ಮ ತಂದೆಯನ್ನು ದಾನಪತ್ರದ ನೋಂದಣಿಯ ಕಾಲಕ್ಕೆ ಕರೆದುಕೊಂಡು ಬರುವಂತೆ ನಿಡಿ.1 ರ ಬಿಕ್ಕಲಂದಾರರು ನಿಮಗೆ ಹೇಳಿದ್ದರಾ ಎಂದರೆ ಸಾಕ್ಷಿ ಸದರಿ ಸಮಯದಲ್ಲಿ ನನ್ನ ತಂದೆ ಇದ್ದರೋ ಇಲ್ಲವೋ ಎಂಬ ಬಗ್ಗೆ ನೆನಪಿಲ್ಲ ಎಂದು ಹೇಳುತ್ತಾರೆ. ದಾನ ಪತ್ರ ಮಾಡಿಕೊಟ್ಟಂತಹ ಸ್ವತ್ತು ನಮ್ಮ ಕುಟುಂಬದ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ದಾನ ಪತ್ರ ಜಾರಿಮಾಡಿಕೊಡುವ ಸಮಯದಲ್ಲಿ ನಮ್ಮ ಇತರೆ ಮೂರು ಜನ ಸಹೋದರರನ್ನು ಕರೆದುಕೊಂಡು ಬಂದಿರಲಿಲ್ಲ. ನೋಂದಣಿ ದಾನಪತ್ರ ಜಾರಿಮಾಡಿಕೊಟ್ಟ ಕಾಲಕ್ಕೆ ನನ್ನ ತಾಯಿ ಜೀವಂತ ಇದ್ದರು. ನೋಂದಣಿ ದಾನಪತ್ರಕ್ಕೆ ನನ್ನ ತಾಯಿಯ ಸಹಿಯನ್ನು ಪಡೆದುಕೊಂಡಿಲ್ಲ.

5. ನೋಂದಣಿ ದಾನ ಪತ್ರ ಜಾರಿಮಾಡಿಕೊಡುವ ಕಾಲಕ್ಕೆ ಸದರಿ ಸ್ವತ್ತಿನ ಖಾತೆ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರಲಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ